# ಶ್ರೀ ಶ್ರೀನಿವಾಸ ಸ್ತೋತ್ರ

ನಾಗರಾಜು ಹಾವೇರಿ-ಪಲ್ಲವೀಪ್ರಿಯ-ಬೆಂಗಳೂರು 9901052578

ಶ್ರೀವೇಂಕಟಲಸಚ್ಛೈಲವಾಸೀ ದಾಸೀಕೃತಾಮರಃ |
ಛಾಯಯಾ ಪಾತು ಮಾಂ ನಿತ್ಯಂ ಶ್ರೀನಿವಾಸಸುರದ್ರುಮಃ ||

ಮೇರು ಪರ್ವತದಲ್ಲಿರುವ ಕಲ್ಪವೃಕ್ಷದಂತೆ, ವೇಂಕಟ ಪರ್ವತದ ಮೇಲೆ ನೆಲೆಸಿರುವ ದೇವತೆಗಳನ್ನೆಲ್ಲ ಕಿಂಕರರನ್ನಾಗಿ ಮಾಡಿಕೊಂಡಿರುವ "ಶ್ರೀನಿವಾಸ" ಎಂಬ ಕಲ್ಪವೃಕ್ಷವು ನನ್ನ ಸಕಲಾಭೀಷ್ಟವನ್ನು ಪೂರೈಸಿ ಪಾಲಿಸಲಿ. ಶ್ರೀನಿವಾಸನು ಅನಿಷ್ಟ ಪರಿಹಾರಕನೂ, ಸಕಲೇಷ್ಟಪ್ರದನೂ ಆದ ಸರ್ವೋತ್ತಮ ದೇವತೆ ಎಂದರ್ಥ.

ದೃಷ್ಟ್ವಾ ದಿಶಿ ದಿಶಿ ಸ್ವೀಯಾನ್ ದಯಯಾ ಪಾಲಯನ್ನಿವ |
ವರ್ತತೇ ವಿಶ್ವತಶ್ಚಕ್ಷುರ್ವೇಂಕಟೇ ವೇಂಕಟೇಶ್ವರಃ ||

ತನಗೆ ಬೇಕಾದ ದೂರದ ಜನರನ್ನು ನೋಡಲೆಂದೇ ಒಬ್ಬನು ಉನ್ನತ ಪ್ರದೇಶದಲ್ಲಿ ನಿಲ್ಲುವುದು ಲೋಕದಲ್ಲಿ ಕಂಡಿದೆ. ಶ್ರೀಶ್ರೀನಿವಾಸನು ಸಕಲ ದಿಕ್ಕುಗಳಲ್ಲಿರುವ ತನ್ನ ಭಕ್ತರನ್ನು ನೋಡಿ ಅವರನ್ನೆಲ್ಲ ಕರುಣೆಯಿಂದ ಸಲಹಲೋ ಎಂಬಂತೆ ಉನ್ನತವಾದ ವೇಂಕಟ ಪರ್ವತದ ಮೇಲೆ ನಿಂತಿರುವನು ಎಂದು ಉತ್ಪ್ರೇಕ್ಷಿಸಿರುವರು. ವಿಶ್ವತಚಕ್ಷುಷ್ ಎಂಬ ಪದದಿಂದಲೇ ಸರ್ವತ್ರ ವ್ಯಾಪ್ತನಾದ ಅವನಿಗೆ ಹೀಗೆ ದೂರದ ಭಕ್ತರನ್ನು ಕಾಣಲೆಂದು ಎತ್ತರದ ಮೇಲೆ ನಿಲ್ಲುವ ಅವಶ್ಯಕತೆ ಇಲ್ಲ ಎಂಬ ತತ್ವವನ್ನೂ ಸೂಚಿಸಿದ್ದಾರೆ.

ಯೇ ಶಂಖಚಕ್ರೋಜ್ಜ್ವಲಬಾಹುಯುಗ್ಮಾಃ
ಸಾಂಘ್ರಿಂ ಭಜಂತೇ ಭವಸಿಂಧುರೇಷಾಮ್ |
ಕಟಿಪ್ರಮಾಣಸ್ತ್ವಿತಿ ವೇಂಕಟೇಶಃ ಸ್ಫುಟೀಕರೋತ್ಯಾತ್ಮಕರಾಂಬುಜಾತ್ಯೈಃ ||

ವೇಂಕಟೇಶನು ಯಾವ ಜನರು, ಶಂಖಚಂಕ್ರಗಳಿಂದ ಶೋಭಿಸುವ ಎರಡು ಬಾಹುಗಳುಳ್ಳವರಾಗಿ ತನ್ನ ಪಾದವನ್ನು ಭಜಿಸುವರೋ ಅಂತಹವರಿಗೆ ಈ

ಭವಸಾಗರವು ಸೊಂಟದಷ್ಟು ಮಾತ್ರವೇ ಎಂಬುದಾಗಿ ತನ್ನ ಕರಕಮಲಗಳಿಂದ ಸ್ಪಷ್ಟಪಡಿಸುತ್ತಿರುವನು.

ಆರೂಢಗರುಡಸ್ಕಂಧಮಾಲಿಂಗಿತರಮಾಧರಮ್ |
ಆನಮಜ್ಜನಸರ್ವಸ್ವಮಾಶ್ರಯೇ ವೇಂಕಟೇಶ್ವರಮ್ ‖

ಗರುಡನ ಮೇಲೆ ಏರಿ ಕುಳಿತಿರುವ, ಶ್ರೀದೇವಿ ಭೂದೇವಿಯರನ್ನು ಆಲಂಗಿಸಿಕೊಂಡಿರುವ, ಪ್ರಣತ ಜನರಿಗೆ ಸರ್ವಸ್ವನಾಗಿರುವ ಶ್ರೀವೇಂಕಟೇಶ್ವರನನ್ನು ಆಶ್ರಯಿಸಿರುವೆನು ಎಂದು ಅರ್ಥ.

ಕಶಿಪೂಕೃತ್ಯ ಯಂ ಶೇತೇ ಗಿರೀಕೃತ್ಯಾಧಿಷ್ಠತಿ |
ಅವತೀರ್ಣೋಽನುಜೀಕೃತ್ಯ ಸ ತದ್ಭಕ್ತಾಗ್ರಣೀಃ ಫಣೀ ‖

ಯಾರನ್ನು ಶೇಷರೂಪದಿಂದ ಹಾಸಿಗೆಯನ್ನಾಗಿಸಿಕೊಂಡು ( ಶೇಷಶಾಯಿಯಾಗಿ ) ಮಲಗಿರುವನೋ, ವೇಂಕಟಪರ್ವತವನ್ನಾಗಿ ಮಾಡಿಕೊಂಡು(ಶ್ರೀನಿವಾಸನಾಗಿ ) ಮೇಲೆ ನಿಂತಿರುವನೋ, ಅಂತಹಾ ಶೇಷನು ಶ್ರೀನಿವಾಸನ ಭಕ್ತರಲ್ಲಿ ಅಗ್ರೇಸರನಾಗಿರುವನು.

ಶಂಕರರವಿಶಶಿಮುಖ್ಯಾಃ ಕಿಂಕರಪದವೀಮುಪಾಶ್ರಿತಾ ಯಸ್ಯ |
ವೇಂಕಟಗಿರಿನಾಥೋಽಸೌ ಪಂಕಜನಯನಃ ಪರಾತ್ಪರೋ ಜಯತಿ ‖

ಶಿವ, ಸೂರ್ಯ, ಚಂದ್ರರೇ ಮೊದಲಾದ ದೇವತೆಗಳು ಯಾರ ಭೃತ್ಯತ್ವವನ್ನು ಹೊಂದಿರುವರೋ, ಉತ್ತಮವಾದ ಬ್ರಹ್ಮಾದಿ ಜಗತ್ತಿಗಿಂತಲೂ ಮಿಗಿಲಾದ ಪುಂಡರೀಕಾಕ್ಷನಾದ ಈ ವೇಂಕಟ ಪರ್ವತದ ಸ್ವಾಮಿಯಾದ ಶ್ರೀಶ್ರೀನಿವಾಸನು ಸರ್ವೋತ್ಕೃಷ್ಠನಾಗಿರುವನು.

ಶ್ರೀವೇಂಕಟಗಿರಿದ್ರೋಣೀಕ್ಷೋಣೀಯಸ್ಯಾನಣೀಯಸೀ |
ತಂ ವರೇಣ್ಯಂ ಸರಾಗ್ರಣ್ಯಂ ವೇದಗಮ್ಯಂ ಭಜಾಮಹೇ ‖

ಯಾರಿಗೆ ಬಹಳ ಉನ್ನತವಾದ ಸಂಪದ್ಭರಿತ ವೇಂಕಟಗಿರಿ ಪರ್ವತದ ತೊಪ್ಪಲು ಪ್ರದೇಶವು ವಾಸಸ್ಥಾನವಾಗಿರುವುದೋ ಅಂತಹಾ ಶ್ರೇಷ್ಠನಾಗಿರುವ

ದೇವಸೇನೆಯ ಮಹಾನಾಯಕನಾಗಿರುವ, ವೇದವೇದ್ಯನಾಗಿರುವ ಆ ಶ್ರೀವೇಂಕಟೇಶನನ್ನ ಭಜಿಸುವೆವು.

ಶ್ರೀವೇಂಕಟಪತೇ ದೀನಗತೇ ರಮ್ಯಾಕೃತೇ ಕ್ಷಿತೌ ।
ಸಮಃ ಸಮಸ್ತಮರ್ತ್ಯಾರ್ತಿಪ್ರಮರ್ದನ ಕಿಮಸ್ತಿತೇ ॥

ದೀನರಿಗೆ ಆಸರೆಯಾದ ಮನೋಹರ ಆಕೃತಿಯುಳ್ಳ ಸಕಲ ಜನರ ಸಂಕಟ ನಿವಾರಕನಾದ ಶ್ರೀವೇಂಕಟೇಶನೇ ನಿನಗೆ ಸಮನಾದವನು ಇರುವನೇನು?

ಸಮಸ್ತಸುಜನಾದಾರಂ ದೋಷದೂರಂ ಗುಣಾಕರಮ್ ।
ಶ್ರೀವೇಂಕಟಾಚಲಾವಾಸಂ ಶ್ರೀನಿವಾಸಂ ಭಜೇಽನಿಶಮ್ ॥

ಸಕಲ ಸಜ್ಜನರಿಗೆ ಆಧಾರಭೂತನೂ, ನಿರ್ದೋಷನೂ, ಗುಣಪೂರ್ಣನೂ ಶ್ರೀವೇಂಕಟಾಗಿರಿನಿಲಯನೂ ಆದ ಶ್ರೀನಿವಾಸನನ್ನು ಅನವರತವೂ ಭಜಿಸುವೆವು.

ಆನಂದತೀರ್ಥವರದೇ ದಾನವಾರಣ್ಯಪಾವಕೇ ।
ಜ್ಞಾನದಾಯಿನೀ ಸರ್ವೇಶೇ ಶ್ರೀನಿವಾಸೇಽಸ್ತು ಮೇ ಮನಃ ॥

ಶ್ರೀಮನ್ಮಧ್ವಾಚಾರ್ಯರಿಗೆ ವರಪ್ರದನೂ, ದಾನವಾರಣ್ಯಕ್ಕೆ ಅಗ್ನಿಯಂತೆ ನಾಶಕನೂ, ಜ್ಞಾನಪ್ರದನೂ ಸಕಲರಿಗೆ ಸ್ವಾಮಿಯೂ ಆದ ಶ್ರೀಶ್ರೀವಾಸನಲ್ಲಿ ನನ್ನ ಮನಸ್ಸು ನೆಲೆಸಲಿ.

ಭಾವಿಸಮೀರರಾದ ಶ್ರೀವಾದಿರಾಜಗುರುಸಾರ್ವಭೌಮರು ತಿರುಮಲೆಗೆ ದಿಗ್ವಿಜಯ ಮಾಡಿಸಿದಾಗ ಶ್ರೀವೇಂಕಟಗಿರಿ ಕ್ಷೇತ್ರವನ್ನು ಅದರ ನಾಯಕನಾದ ಶ್ರೀಶ್ರೀನಿವಾಸನ ಭಕ್ತಿಯಿಂದ ಸ್ತೋತ್ರ ಮಾಡಿದ್ದಾರೆ. ಅವರ ವದನಾರವಿಂದದಲ್ಲಿ ಹರಿದು ಬಂದ ಸ್ತೋತ್ರರತ್ನವನ್ನು ಈ ಶರನ್ನವರಾತ್ರಿಯ ಶುಭಸಂದರ್ಭದಲ್ಲಿ ಎಲ್ಲಾ ಮಾಧ್ವ ಬಂಧುಗಳು ಹಾಗೂ ಸಕಲ ಸದ್ಭಕ್ತರೂ ಪಠಾಯಣ ಮಾಡಿ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮನ್ಮೂಲ ರಘುಪತಿ ವೇದವ್ಯಾಸ ದೇವರ ಪರಮಾನುಗ್ರಹಕ್ಕೆ ಪಾತ್ರರಾಗಲು ಸವಿನಯ ಮನವಿ.